ದಾನದ ಮದದಿಂದ ಮೆರೆಯುತ್ತಿದ್ದ ಬಲಿಯು ದಾನ ಮಾಡಲು ಎರೆದ ನೀರಧಾರೆ ಅವನ ಪಾದ ಸೋಕುತ್ತಿರುದ್ದಂತೆ, ವಾಮನ ತ್ರಿವಿಕ್ರಮನಾಗಿ ಬೆಳೆದ. ತನ್ನ ಎರಡು ಹೆಜ್ಜೆಗಳಿಂದ ಭೂಲೋಕ ಸ್ವರ್ಗಲೋಕಗಳನ್ನು, ಮೂರನೆಯ ಹೆಜ್ಜೆಯನ್ನು ಬಲಿ ತೋರಿದ ಅವನ ತಲೆಯ ಮೇಲೇ ಇರಿಸಿದ. ತಮ್ಮಿಂದಲೇ ದಾನ ಬೇಡಿ ಪಡೆದು ಈ ರೀತಿ ಕೃತಘ್ನನಂತೆ ವ್ಯವಹರಿಸುತ್ತಿರುವ ಭಗವಂತನ ನಡೆಯ ಔಚಿತ್ಯವನ್ನು ಬಲಿಯ ಪತ್ನಿ ವಿಂಧ್ಯಾವಳೀ ಪ್ರಶ್ನಿಸುತ್ತಾಳೆ. ಆಗ ಭಗವಂತ, 'ನನ್ನ ಅನುಗ್ರಹಕ್ಕೆ ಪಾತ್ರರಾದವರಿಗೆ ಕುಲ, ರೂಪ, ವಿದ್ಯೆ ಅಧಿಕಾರ, ಧನ ಮೊದಲಾದ ಮದಗಳು ಇರದಂತೆ ಮಾಡುತ್ತೇನೆ. ನಿಮ್ಮನ್ನು ಅನುಗ್ರಹಿಸಲಿಕ್ಕಾಗಿಯೇ ಪರೀಕ್ಷೆ. ಗುರು ಬೇಡವೆಂದು ತಡೆದರೂ ಆಡಿದ ಮಾತಿನಂತೆ ನಡೆದ ಈತನ ಸತ್ಯನಿಷ್ಠೆಗಾಗಿ ಈತನಿಗೆ ಸುತಲ ಲೋಕದ ಆಧಿಪತ್ಯವನ್ನು ಕರುಣಿಸಿದ್ದೇನೆ. ಮುಂದೆ ಸಾವರ್ಣಿ ಮನ್ವಂತರದಲ್ಲಿ ಈತನಿಗೆ ದೇವೇಂದ್ರ ಪದವಿಯನ್ನೂ ಕರುಣಿಸುವೆನು. ಅಷ್ಟೇ ಅಲ್ಲದೆ ಸದಾಕಾಲ ಅವನಿಗೆ ನನ್ನ ದರ್ಶನಭಾಗ್ಯವನ್ನೂ ಕರುಣಿಸುವೆನು' ಎಂದನು.

ಭಗವಂತನ ಈ ಕೃಪಾನುಗ್ರಹವನ್ನು ಸ್ಮರಿಸುತ್ತಾ ಪತ್ನಿ ವಿಂಧ್ಯಾವಳಿ ಸಹಿತ ಬಲೀಂದ್ರನ ಚಿತ್ರವನ್ನೂ ಬರೆದು, ಬಾಣ ಕೂಷ್ಮಾಂಡ ಮುರ ಮೊದಲಾದ ಅವನ ಪರಿವಾರದವರನ್ನೂ ಕಲ್ಪಿಸಿ ಕೋಟೆ (ರಂಗವಲ್ಲಿಯಲ್ಲಿ) ಕಟ್ಟಬೇಕು. ಕೆಲವರು ಗೋಮಯದಿಂದ ಉಂಡೆ ಮಾಡಿ ಅದಕ್ಕೆ ಚೆಂಡು, ಸೇವಂತಿಗೆ ಹೂಗಳನ್ನು ಸಿಕ್ಕಿಸಿ ಅಲಂಕರಿಸುವ ಪದ್ಧತಿಯೂ ಇದೆ. ಬಲೀಂದ್ರನಿಗೂ ಕಲಶದಲ್ಲಿ ಆವಾಹಿತನಾದ ವಿಷ್ಣುವಿಗೂ ಷೋಡಶೋಪಚಾರ ಪೂಜೆ ಮಾಡಬೇಕು. ಆ ದಿನ ಸಂಜೆ ಮುರೂಮುಕ್ಕಾಲು ಘಳಿಗೆಗಳ ಕಾಲ ಬಲೀಂದ್ರನ ಅಧಿಕಾರ. ಬಲೀಂದ್ರನ ರಾಜ್ಯದಲ್ಲಿ ಹಾಲು ಹಳ್ಳವಾಗಿ ಹರಿಯುತ್ತದೆ. ಬೆಣ್ಣೆ ಬೆಟ್ಟದಷ್ಟು ರಾಶಿ, ಕಲ್ಲುಗಳೆಲ್ಲ ಚಿನ್ನ, ಹುಲ್ಲುಗಳೆಲ್ಲಾ ಮೃಷ್ಟಾನ್ನವಾಗಿ ಇರುತ್ತದೆ ಎಂಬುದು ನಂಬಿಕೆ. ಬಲೀಂದ್ರನ ಕೃಪೆಯಿಂದ ಇಂತಹ ಸಮೃದ್ಧಿ ನಮ್ಮದಾಗಲಿ ಎಂದು ಪ್ರಾರ್ಥಿಸಬೇಕು. ಈ ಸಮಯದಲ್ಲೇ ಕೆಲವು ಕುಟುಂಬಗಳಲ್ಲಿ ಕಲಶದ ಬಳಿ ಸ್ಥಾಪಿಸಿದ ಕನ್ನಡಿಯ ಮೆಲೆ ಉದ್ದಿನಕಾಳನ್ನು ಉರುಳಿಸುವ ಪದ್ಧತಿಯೂ ಇದೆ. ಅಷ್ಟು ಕಾಲ ಬಲೀಂದ್ರನ ಅಧಿಕಾರವಿರುವುದು. ಆಗ ಅವನನ್ನು ಸ್ವಾಗತಿಸಲು ಮನೆಯನ್ನೆಲ್ಲಾ ದೀಪಗಳ ಜ್ಯೋತಿಯಿಂದ ಬೆಳಗುತ್ತಾರೆ. ಆತನ ಆಗಮನದ ಆನಂದದ ಸೂಚಕವಾಗಿ ಬಾಣ ಬಿರುಸು ಪಟಾಕಿಗಳನ್ನು ಹಚ್ಚುತ್ತಾರೆ.

ಸ್ಥಾನಮಾನ ಅಹಂಕಾರಗಳನ್ನೆಲ್ಲಾ ಭಗವಂತನಿಗೆ ಅರ್ಪಿಸಿ, ಆತನ ಪದತಲದಲ್ಲಿ ಲೀನವಾದವನು ಬಲಿಯೆಂಬ ಈ ಮಹಾಮಹಿಮ. ಆವನಂತೆ ನಾವೂ ನಮ್ಮ 'ಅಹಂ' 'ಮಮ'ಗಳನ್ನು ಭಗವಂತನಿಗೆ ಅರ್ಪಿಸಿದ್ದೇ ಆದಲ್ಲಿ ಅವನ ಕೃಪೆಗೆ ಪಾತ್ರರಾಗುವುದು ಎಷ್ಟು ದೂರ ಉಳಿದೀತು!

**ಸೋದರ ಬಿದಿಗೆ:** ಮಾರನೆಯ ದಿನ ಎಂಟು ಜಾವದಲ್ಲಿ ನಾಲ್ಕೂ ವರೆ ಜಾವ ಇದ್ದಾಗ '**ಸ್ವರಕ್ಷಣಕಾಮೋ ಯಮಾದಿಪೂಜನಮಹಂ ಕರಿಷ್ಯೇ**' ಎಂದು ಸಂಕಲ್ಪಿಸಿ, ಕಲಶಜಲದಲ್ಲಿ ಯಮನನ್ನು ಆವಾಹಿಸಿ, ಸಾಲಿಗ್ರಾಮದೊಡನೆ ಎರಡಕ್ಕೂ ಅರ್ಘ್ಯಪಾದ್ಯಾದಿ ಪೂಜೆಯನ್ನು ಸಲ್ಲಿಸಬೇಕು. 'ಯಮುನೆಯ ಸೋದರನಾದ ಯಮರಾಜನೆ, ಸೂರ್ಯಪುತ್ರನೆ, ಕಿಂಕರರೊಡಗೂಡಿದ ನನ್ನನ್ನು ಕಾಪಾಡು' ಎಂದು ಪ್ರಾರ್ಥನೆ ಸಲ್ಲಿಸಬೇಕು. ಅನಂತರ ಯಮುನಾಪೂಜೆಯನ್ನೂ ಮಾಡಬೇಕು. ಸೋದರನನ್ನು ಮನೆಗೆ ಕರೆದು ಊಟ ಬಡಿಸಿ, 'ಸೋದರನೇ ನಾನು ನಿವೇದಿಸಿತ್ತಿರುವ ಈ ಆಹಾರವನ್ನು ಸೇವಿಸು. ಇದರಿಂದ ಯಮ ಯಮುನೆಯರು ಸುಪ್ರೀತರಾಗಲಿ' ಎಂದು ಪ್ರಾರ್ಥಿಸಬೇಕು.

ಯಮ ಹಾಗೂ ಯಮುನೆಯರು ಸೋದರ-ಸೋದರಿಯರು. ಯಮುನೆ ತನ್ನ ಅಣ್ಣನನ್ನು ಮನೆಗೆ ಬರಬೇಕೆಂದು ಕರೆಯುತ್ತಲೇ ಇದ್ದಳು. ಯಮನಿಗೆ ಬಿಡುವೇ ಇಲ್ಲದ್ದರಿಂದ, ಅವನು ಅವಳ ಮನೆಗೆ ಬರುವುದನ್ನು ಮುಂದೆ ಹಾಕುತ್ತಲೇ ಬಂದ. ಕೊನೆಗೆ ಒಂದು ದಿನ ಯಮುನೆ 'ಇಂದು ನೀನು ಬರಲೇಬೇಕು' ಎಂದು ಅಣ್ಣನ ಮೇಲೆ ಒತ್ತಾಯ ಹೇರಿ ಹಠಮಾಡಿದಳು. ಅಂದು ಕಾರ್ತಿಕ ಶುದ್ಧ ಬಿದಿಗೆ. ಅಂದು ನರಕ ಪ್ರವೇಶಕರಿಗೆ, ನರಕ ಅಧಿಕಾರಿಗಳಿಗೆ ಎಲ್ಲರಿಗೂ ರಜೆ ನೀಡಿ, ತಂಗಿಯ ಹಠಕ್ಕೆ ಮಣಿದು ಯಮನು ಅವಳ ಮನೆಗೆ ಬರಲೇಬೇಕಾಯಿತು. ಆದುದರಿಂದ ಅಂದು ಸೋದರರು ಸೋದರಿಯರ ಮನೆಯಲ್ಲಿ ಊಟಮಾಡುತ್ತಾರೆ. ಇದರಿಂದ ಯಮನ ಶಿಕ್ಷೆಯಿಂದ ರಿಯಾಯಿತಿ ದೊರಕುತ್ತದೆ ಎಂಬ ನಂಬಿಕೆ ಜನರಲ್ಲಿದೆ. ಸೋದರಿಯ ರಿಲ್ಲದವರು ದಾಯಾದಿ ಸೋದರಿಯರ ಮನೆಗೋ ಬಂಧುಮಿತ್ರರ ಸೋದರಿಯರ ಮನೆಗೋ ಹೊಗಿ ಊಟಮಾಡಬೇಕು. ಕೊನೆಗೆ ಗಿಡಮರಗಳಲ್ಲಾದರೂ ಸೋದರ ಭಾವ ಹೊಂದಿ, ಅದರೊಡನೆ ಊಟ ಮಾಡಬೇಕು ಎಂದು ಶಾಸ್ತ್ರಗಳು ತಿಳಿಸುತ್ತವೆ.

ಈ ಪರಂಪರೆ ಸಾಧಾರಣವಾಗಿ ಪ್ರಚಲಿತವಾಗಿಲ್ಲದಿದ್ದರೂ ಹಲವಾರು ಕುಟುಂಬಗಳು ವಂಶಪರಂಪರೆಯಿಂದ ಈ ಆಚರಣೆಯನ್ನು ನಡೆಸಿಕೊಂಡು ಬರುತ್ತಿವೆ. ಸಹಮಾನವರೊಡನೆ, ಸಹಜೀವಿಗಳೊಡನೆ ವಿಶ್ವಭ್ರಾತೃತ್ವಭಾವ, '**ವಸುಧೈವ ಕುಟುಂಬಕಂ**' ಎಂಬ ಭಾವಗಳನ್ನು ಬೆಳೆಸಿಕೊಳ್ಳಲು ಇದು ಪ್ರೇರಕವಾಗಿದೆ.

ಇದೇ ದಿನ ಹಸುಗಳನ್ನೂ ಎತ್ತುಗಳನ್ನೂ ಶುದ್ಧಸ್ನಾನ ಮಾಡಿಸಿ ಅಲಂಕರಿಸುವ ಪದ್ಧತಿಯಿದೆ. ಅವುಗಳಿಗೆ ಸುಗ್ರಾಸ ಕೊಟ್ಟು, ಕಲ್ಪಿತ ಗೋವರ್ಧನ ಬೆಟ್ಟವನ್ನು ಹಸುವಿನ ಸಗಣಿಯಿಂದಲೋ ಅನ್ನದ ರಾಶಿಯಿಂದಲೋ ನಿರ್ಮಾಣ ಮಾಡಿ, ಅಥವಾ ಚಿತ್ರ ಬರೆದು ಅದನ್ನೂ ಪೂಜಿಸಬೇಕು. ಅಲಂಕರಿಸಿ ಪೂಜಿಸಿದ ಗೋವುಗಳನ್ನು ಕರೆದುಕೊಂಡು ಬಂದು ಈ ಬೆಟ್ಟಕ್ಕೆ ಪ್ರದಕ್ಷಿಣೆ ಬರಬೇಕು. ಬಳಿಕ ಗೋವರ್ಧನನಿಗೆ, ಗೋಪಾಲನಿಗೆ ನೈವೇದ್ಯ ಮಾಡಿ ಅದನ್ನು ಎಲ್ಲರೂ ಹಂಚಿಕೊಂಡು ಪ್ರಸಾದವಾಗಿ ಸ್ವೀಕರಿಸಬೇಕು. ಈ ಪರಂಪರೆಯೂ ಹಲವೆಡೆ ಪ್ರಚಲಿತದಲ್ಲಿದ್ದು ಇದೂ ಮೇಲಿನ ವಿಶ್ವ ಕುಟುಂಬ ಭಾವಕ್ಕೆ ಪೂರಕವಾಗಿದೆ.

ಹೀಗೆ ದೀಪಾವಳಿ ಹಬ್ಬವು ಜೀವಿಗಳ ಅರಿವಿಗೆ ಸಾಧಕವಾದ ಜ್ಞಾನೇಂದ್ರಿಯ ರೂಪದೀಪಗಳಿಗೆ, ಅವುಗಳ ವಿಷಯಗಳಾದ ಶಬ್ದ ರೂಪಾದಿ ದೀಪಗಳಿಗೆ, ಇವುಗಳಿಗೂ ಬೆಳಕಾಗಿರುವ ಪ್ರಾಣದೀಪಕ್ಕೆ, ಪ್ರತಿ ಜೀವಿಯ ಸಾರ ಸರ್ವಸ್ವವನ್ನು ತುಂಬಿ ಬೆಳಗುವ ಪರಿಪೂರ್ಣ ಪರಂಜ್ಯೋತಿ ದೀಪಕ್ಕೆ ಸೂಚಕವಾಗಿದ್ದು, ಜೀವಗಳ ಅಂತರಂಗ ಬಹಿರಂಗ ಅನುಭವಗಳಿಗೆ ಸಾಕ್ಷೀಭೂತವಾಗಿದೆ. ಇಹಲೋಕ-ಪರಲೋಕ ಸುಖ ಶಾಂತಿ ಸಮೃದ್ಧಿಗಳೊಡನೆ ಸಕಲಜೀವಿಗಳ ಸ್ನೇಹ, ಪ್ರೀತಿ, ಹಿತ ಕಾಮನೆಯೊಡಗೂಡಿದ ಹಬ್ಬವಾಗಿದೆ, ದೀಪಾವಳಿ. ✷